ಜೆಎಸ್‌ಎಸ್ ಕಾಲೇಜು, ನಂಜನಗೂಡು–571301

ನ್ಯಾಕ್‌ನಿಂದ 'ಬಿ++' ಮಾನ್ಯತೆ ಪಡೆದಿದೆ (III Cycle) * ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ

ದೂರವಾಣಿ: 08221–226277 ಈ–ಮೇಲ್ : jsscn68@yahoo.com ಫ್ಯಾಕ್ಸ್: 08221 – 223894 ವೆಬ್‌ಸೈಟ್: www.jssnjd.org

ಉಲ್ಲೇಖ : ನಂ. ಜೆಎಸ್‌ಎಸ್‌ಸಿಎನ್/ 34 /2023–24 ದಿನಾಂಕ : 15.04.2023

ಗೆ,

ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ
ಮೈಸೂರು – 05

ಮಾನ್ಯರೆ,

*ವಿಷಯ : 2021–22ನೇ ಸಾಲಿನ ಲೆಕ್ಕ ತಪಾಸಣಾ ವರದಿಗೆ ಉತ್ತರ ಕಳುಹಿಸುತ್ತಿರುವ ಬಗ್ಗೆ.*

*ಉಲ್ಲೇಖ : ತಮ್ಮ ಪತ್ರ ಸಂಖ್ಯೆ: ಪ್ರಾಕಮೈ/ಕಾಶಿಇ/ಲೆ.ಪ/ಜೆ.ಎಸ್.ಎಸ್.ನ/21–22/2110 ದಿ. 07.03.23.*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021–22ನೇ ಸಾಲಿನ ನಮ್ಮ ಕಾಲೇಜಿನ ಲೆಕ್ಕ ತಪಾಸಣೆಯ ವರದಿಗೆ ನಿಗಧಿತ ನಮೂನೆಯಲ್ಲಿ ಉತ್ತರಗಳನ್ನು ಸಿದ್ಧಪಡಿಸಿ ದ್ವಿಪ್ರತಿಯಲ್ಲಿ ತಮ್ಮ ಕಚೇರಿಗೆ ಕಳುಹಿಸುತ್ತಿದ್ದೇನೆ. ದಯವಿಟ್ಟು ತಲುಪಿದ್ದಕ್ಕೆ ಸ್ವೀಕೃತಿ ಕಳುಹಿಸಿಕೊಡಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರಾಚಾರ್ಯರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ನಂಜನಗೂಡು-571 301

ಪ್ರಾದೇಶಿಕ ಜಂಟಿ ನಿರ್ದೇಶಕರ ಕ...
ಕಾಲೇಜು ಶಿಕ್ಷಣ ಇಲಾಖೆ, ಮೈಸೂರು-...
ಸ್ವೀಕೃತಿ
ಸಂಖ್ಯೆ.......
ದಿನಾಂಕ 17/4/23
ಸಹಿ

o/c

| | | | |
|---|---|---|---|
| **2021–22**<br>**ಭಾಗ – 3**<br>**ಪ್ಯಾರಾ–9** | <u>ಜಂಟಿ ಖಾತೆ : **2021–22** ನೇ ಸಾಲು : ಶುಲ್ಕ ವಿನಾಯಿತಿಯ ಬಾಬ್ತುಗಳ ಮರುಭರಿಕೆಗೆ ಪತ್ರ</u> **<u>ವ್ಯವಹರಿಸಿ, ಮುಂದಿನ ಅಗತ್ಯ ಕ್ರಮವಹಿಸಿ, ವರದಿ ಸಲ್ಲಿಸುವ ಬಗ್ಗೆ:</u>** ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಅನುದಾನಿತ ವಿದ್ಯಾರ್ಥಿಗಳಿಂದ ನಿಯಮನುಸಾರ ದುಪ್ಪಟ್ಟು ದರದಲ್ಲಿ ವಸೂಲು ಮಾಡುವ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ/139/ಯುಪಿಸಿ/2014, ದಿನಾಂಕ 18.10.2014 ರ ಅನುಸಾರ ಭವಿಷ್ಯವರ್ತಿಯಾಗಿ ಒಂದು ದರವನ್ನು ಸರ್ಕಾರದ ಜಂಟಿ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ. ಈ ನಿಯಮಾನುಸಾರ ಈ ಕಾಲೇಜಿನಲ್ಲಿ ಜಂಟಿ ಖಾತೆಗೆ ಜಮೆ ಮಾಡಿರುವ ಶುಲ್ಕಗಳ ಮೊತ್ತಗಳ ದಾಖಲಾತಿಗಳನ್ನು ಪರಿಶೀಲಿಸಲಾಗಿ ಒಂದು ದರದಂತೆ ಜಮೆ ಮಾಡಬೇಕಾಗಿರುವ ಶುಲ್ಕಗಳ ಒಟ್ಟು ಮೊತ್ತ **ರೂ. 4,60,880.00** ಗಳಾಗಿದ್ದು ಸಂಪೂರ್ಣ ಮೊತ್ತವನ್ನು ಜಮೆ ಮಾಡಿರುವುದಿಲ್ಲ. ಈ ಕೂಡಲೆ ಸದರಿ ಮೊತ್ತವನ್ನು ಜಂಟಿ ಖಾತೆಗೆ ಜಮೆ ಮಾಡಿ ಅನುಪಾಲನೆಯಲ್ಲಿ ವರದಿ ಸಲ್ಲಿಸಲು ಸೂಚಿಸಿದೆ. | 2021–22ನೇ ಸಾಲಿನಲ್ಲಿ ನಮ್ಮ ಕಾಲೇಜಿನಲ್ಲಿ 22 ಸಾ.ಅ. ವಿದ್ಯಾರ್ಥಿಗಳಿಂದ ಮಾತ್ರ ದುಪ್ಪಟ್ಟು ದರದಲ್ಲಿ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕವನ್ನು ವಸೂಲು ಮಾಡಲಾಗಿದೆ. ಉಳಿದ ವಿದ್ಯಾರ್ಥಿಗಳಿಂದ ವಸೂಲು ಮಾಡಲಾಗಿರುವುದಿಲ್ಲ. ವಸೂಲಿಯಾದ ಮೊತ್ತದಲ್ಲಿ ಒಂದು ದರವನ್ನು ಸರ್ಕಾರದ ಜಂಟಿ ಖಾತೆಗೆ ಜಮಾ ಮಾಡಲಾಗಿದೆ. ಜಮಾ ಮಾಡಲಾಗಿರುವ ಮೊತ್ತದ ವಿವರಗಳು ಕೆಳಕಂಡಂತಿದೆ.<br><br>ಬೋಧನಾ ಶುಲ್ಕ ರೂ. 20680.00<br>ಪ್ರಯೋಗಾಲಯ ಶುಲ್ಕ ರೂ. 1300.00 | |

| | | | |
|---|---|---|---|
| **2021–22**<br>**ಭಾಗ – 3**<br>**ಪ್ಯಾರಾ–17** | **2021–22ನೇ ಸಾಲಿನ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಕಲ್ಯಾಣ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ವಂತಿಗೆಗಳ ಬಾಬ್ತುಗಳ ಬಗ್ಗೆ:** ಈ ಕಾಲೇಜಿನಲ್ಲಿ 2021–22 ನೇ ಸಾಲಿನಲ್ಲಿ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿಗಾಗಿ ಒಟ್ಟು ರೂ. 13,550/– ಗಳನ್ನು ವಸೂಲಿಸಿ ಸಂಗ್ರಹಿಸಿ, ಇದರಲ್ಲಿ ಶೇ. 60 ಹಾಗೂ ಶೇ. 40 ರ ಮೊಬಲಗುಗಳನ್ನು ನಿಯಮಾನುಸಾರ ವಿತರಣೆ ಹಾಗೂ ಪಾವತಿಸಿರುವುದಿಲ್ಲ. ಹಾಗೂ ಈ ಸಾಲಿನಲ್ಲಿ ಶಿಕ್ಷಕರ ಕಲ್ಯಾಣ ನಿಧಿ ವಂತಿಕೆಯಾಗಿ ಒಟ್ಟು ರೂ. 13,550/– ಗಳನ್ನು ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ವಂತಿಕೆಯಾಗಿ ಒಟ್ಟು ರೂ. 10,980/– ಗಳನ್ನು ವಸೂಲಿಸಿ, ಸಂಗ್ರಹಿಸಿ, ಈ ಸಂಬಂಧಿಸಿದ ಇಲಾಖೆಯ ಲೆಕ್ಕ ಶೀರ್ಷಿಕೆಗಳಿಗೆ ಪಾವತಿಸದೆ, ಈ ಬಾಬ್ತುಗಳನ್ನು ಕಾಲೇಜು ಖಾತೆಯಲ್ಲಿಯೇ ಉಳಿಸಿಕೊಳ್ಳಲಾಗಿರುತ್ತದೆ.<br>ಆದುದರಿಂದ ಈ ಬಾಬ್ತುಗಳನ್ನು ಈ ಸಂಬಂಧಿತ ಇಲಾಖೆಗಳ ಲೆಕ್ಕ ಶೀರ್ಷಿಕೆಗಳಿಗೆ ಪಾವತಿಸಿ, ವರದಿ ಸಲ್ಲಿಸಲು ಸೂಚಿಸಿದೆ. ಈ ವರದಿ ಸಲ್ಲಿಸುವವರೆಗೆ ಈ 03 ಬಾಬ್ತುಗಳ ಒಟ್ಟು ಮೊತ್ತ **ರೂ. 37,940/–** ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ. | ಈ ಕಾಲೇಜಿನಲ್ಲಿ 2021–22ನೇ ಸಾಲಿನಲ್ಲಿ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿಯಲ್ಲಿ ರೂ. 13550.00 ಗಳು ವಸೂಲಿಯಾಗಿದ್ದು, ನಿಯಮಾನುಸಾರದಂತೆ 40% ನಿಧಿಯನ್ನು ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿಗೆ ಜಮಾ ಮಾಡಲಾಗಿದೆ. ಉಳಿದ 60% ಮೊಬಲಗನ್ನು ನಿಯಮಾನುಸಾರ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಗಿದೆ. ವಿತರಣೆ ಮಾಡಿದ ವಿವರವನ್ನು ಲಗತ್ತಿಸಲಾಗಿದೆ ಹಾಗೂ ಈ ಸಾಲಿನಲ್ಲಿ ಶಿಕ್ಷಕರ ಕಲ್ಯಾಣ ನಿಧಿ ವಂತಿಕೆಯಾಗಿ ಒಟ್ಟು ರೂ. 13550.00 ಗಳನ್ನು ಸಂಬಂಧಪಟ್ಟ ಖಾತೆಗೆ ಜಮಾ ಮಾಡಲಾಗಿದೆ. ಚಲನ್ ಪ್ರತಿಯನ್ನು ಲಗತ್ತಿಸಲಾಗಿದೆ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ವಂತಿಕೆ ಒಟ್ಟು ರೂ. 10980.00 ಗಳನ್ನು ವಸೂಲು ಮಾಡಿ ಸಂಬಂಧಿಸಿದ ಇಲಾಖೆಗೆ ಜಮಾ ಮಾಡಲಾಗಿದೆ. ಚಲನ್ ಪ್ರತಿಯನ್ನು ಲಗತ್ತಿಸಲಾಗಿದೆ. | |

| | | | |
|---|---|---|---|
| **2021–22**<br>ಭಾಗ – 3<br>ಪ್ಯಾರಾ–18 | **2021–22ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ವೇತನದ ಶುಲ್ಕ ಮರುಭರಿಕೆಯ ಬಾಕಿ ಬಾಬ್ತುಗಳ ಬಿಡುಗಡೆಗೆ ಪತ್ರ ವ್ಯವಹರಿಸಿ, ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಂಡು, ವರದಿ ಸಲ್ಲಿಸುವ ಬಗ್ಗೆ:**<br>ಈ ಕಾಲೇಜಿನಲ್ಲಿ 2021–22 ನೇ ಸಾಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನವು ಈ ಸಂಬಂಧಿತ ವಿದ್ಯಾರ್ಥಿಗಳ ಖಾತೆಗಳಿಗೆ ಈ ಇಲಾಖೆಯಿಂದಲೇ ನೇರವಾಗಿ ಜಮೆಯಾಗಿದ್ದು, ಕಾಲೇಜಿಗೆ ಯಾವುದೇ ಶುಲ್ಕಗಳ ಮರುಭರಿಕೆಗಳಿಗೆ ಬಿಡುಗಡೆಯಾಗಿರುವುದಿಲ್ಲ ಎಂದು ತಿಳಿಸಲಾಗಿದೆ. 2020–21ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು 76 ವಿದ್ಯಾರ್ಥಿಗಳಿಗೆ ಒಟ್ಟು ಮೊತ್ತ ರೂ. 1,83,100.00 ಮತ್ತು ರೂ. 1,56,150.00 ಗಳು ಮಾತ್ರ ಅಪೂರ್ಣವಾಗಿ ಬಿಡುಗಡೆಯಗಿದ್ದು, ಈ ಶುಲ್ಕ ವಿನಾಯಿತಿಯ ಮರುಭರಿಕೆಗೆ ಬಾಕಿ ಇರುತ್ತವೆ. ಆದುದರಿಂದ ಈ ವಿದ್ಯಾರ್ಥಿಗಳ ವಿನಾಯಿತಿಯು ಶುಲ್ಕ ಮರುಭರಿಕೆಗಳ ಪೂರ್ಣ ವಿದ್ಯಾರ್ಥಿ ವೇತನದ ಅನುದಾನ ಬಿಡುಗಡೆಗಳಿಗೆ ಸಂಬಂಧಿತ ಇಲಾಖೆಗಳ ಕಚೇರಿಗಳಿಗೆ ಕೋರಿಕೆಯ ವಿವರದ ಪತ್ರ ವ್ಯವಹರಿಸಿ, ಮುಂದಿನ ಕ್ರಮಗಳನ್ನು ಕೈಗೊಂಡು, ವರದಿ ಸಲ್ಲಿಸಲು ಸೂಚಿಸಿದೆ. ಈ ವರದಿ ಸಲ್ಲಿಸುವವರೆಗೆ ಈ ಬಾಕಿ ಬಾಬ್ತುಗಳ ಒಟ್ಟು ಮೊತ್ತ ರೂ. 3,39,250/– ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ. | 2020–21ನೇ ಸಾಲಿನ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಫೀ ಶುಲ್ಕ ಬಾಬ್ತು ಅಪೂರ್ಣವಾಗಿ ಬಿಡುಗಡೆಯಾಗಿದ್ದು, ಬಾಕಿ ಬರಬೇಕಾಗಿರುವ ಮೊತ್ತಕ್ಕೆ ಪತ್ರ ವ್ಯವಹರಿಸಿರುತ್ತೇವೆ ಹಾಗೂ ಖುದ್ದು ಇಲಾಖೆಗೆ ಹೋಗಿ ಮೌಖಿಕವಾಗಿಯೂ ತಿಳಿಸಿರುತ್ತೇವೆ. ಅವರು ಸರ್ಕಾರಕ್ಕೆ ನಾವು ತಿಳಿಸಿರುತ್ತೇವೆ ಬಾಕಿ ಮೊತ್ತ ಸರ್ಕಾರದಿಂದ ಬಿಡುಗಡೆಯಾದ ನಂತರ ನಿಮಗೆ ಕೊಡುತ್ತೇವೆ ಎಂದು ತಿಳಿಸಿರುತ್ತಾರೆ. | |

| | | | |
|---|---|---|---|
| 2021–22<br>ಭಾಗ – 3<br>ಪ್ಯಾರಾ–19 | **2021–22 ನೇ ಸಾಲಿನ ಸಂಚಿಹೊನ್ನಮ್ಮ ಹಾಗೂ ಸರ್ ಸಿ ವಿ ರಾಮನ್ ವಿದ್ಯಾರ್ಥಿ ವೇತನವನ್ನು ವಿತರಿಸಿರುವ ಬಗ್ಗೆ:** ಈ ಕಾಲೇಜಿನಲ್ಲಿ 2021–22ನೇ ಸಾಲಿನಲ್ಲಿ ಸಂಚಿಹೊನ್ನಮ್ಮ ವಿದ್ಯಾರ್ಥಿ ವೇತನದ ಬಾಬ್ತು ಮತ್ತು ಸರ್ ಸಿ ವಿ ರಾಮನ್ ವಿದ್ಯಾರ್ಥಿ ವೇತನದ ಬಾಬ್ತು ಬಿಡುಗಡೆಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸಂಬಂಧಿಸಿದ ಇಲಾಖೆಗಳೊಂದಿಗೆ ಪತ್ರ ವ್ಯವಹರಿಸಿ ವಿದ್ಯಾರ್ಥಿ ವೇತನ ಬಿಡುಗಡೆಗೆ ಕ್ರಮವಹಿಸಲು ತಿಳಿಸಿದೆ. | 2021–22ನೇ ಸಾಲಿನಲ್ಲಿ ವಿದ್ಯಾರ್ಥಿಗಳು ಎಸ್ಎಸ್‌ಪಿ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಇಲಾಖೆಗೆ ಪತ್ರ ವ್ಯವಹರಿಸಿ ಸರ್ ಸಿ ವಿ ರಾಮನ್ ಮತ್ತು ಸಂಚಿ ಹೊನ್ನಮ್ಮ ವಿದ್ಯಾರ್ಥಿ ವೇತನ ಬಿಡುಗಡೆ ಮಾಡುವಂತೆ ಮನವಿ ಮಾಡಿರುತ್ತೇವೆ. | |

ಪ್ರಾಂಶುಪಾಲರು
ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ನಂಜನಗೂಡು-571 301